ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\2064\2015\ಸನಿಕಾಸ–1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:10/03/2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ದೂರುದಾರರಾದ ಶ್ರೀ.ಎಸ್.ಎನ್.ಹನುಮಂತರಾಜು ಬಿನ್ ನಂಜಪ್ಪ ಸೊಣ್ಣೇನಹಳ್ಳಿ, ಹೊಳವನಹಳ್ಳಿ ಹೋಬಳಿ, ಕೊರಟಗೆರೆ ತಾಲ್ಲೂಕ್, ತುಮಕೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕ್ ಹೊಳವನಹಳ್ಳಿ ಹೋಬಳಿ ಸೊಣ್ಣೇನಹಳ್ಳಿಯ ನಿವಾಸಿಯಾದ ಶ್ರೀ.ಎಸ್.ಎನ್.ಹನುಮಂತರಾಜು ಬಿನ್ ನಂಜಪ್ಪ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕ್ ತಹಶೀಲ್ದಾರ್‌ರಾದ ಶ್ರೀ.ಕೆ.ಎ.ಅಖೇಶ್‌ಬಾಬು (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–** ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕ್ ಹೊಳವನಹಳ್ಳಿ ಹೋಬಳಿ ಸೊಣ್ಣೇನಹಳ್ಳಿ ಗ್ರಾಮದ ಪೂರ್ವ ಗಡಿಗೆ 16 ಅಡಿ ಅಗಲದ ರಸ್ತೆ ಗಂಟಿಗರಹಳ್ಳಿ ಗ್ರಾಮದಿಂದ ಕೊಳವನಹಳ್ಳಿ ರಸ್ತೆಯವರೆಗೆ ಹಾದು ಹೋಗಿದ್ದು, ಸದರಿ ರಸ್ತೆಯು ಸೊಣ್ಣೇನಹಳ್ಳಿ ಕೊಳವನಹಳ್ಳಿ ರಸ್ತೆಯನ್ನು ಸಂದಿಸುವ ಜಾಗದಲ್ಲಿ ಸದರಿ ಸೊಣ್ಣೇನಹಳ್ಳಿ ಗ್ರಾಮಸ್ಥರಾದ ಸರ್ವೆ ನಂ.8ರ ಮಾಲೀಕರು ಮುಳ್ಳು ತಂತಿ ಹಾಕಿ ಸದರಿ ರಸ್ತೆಯನ್ನು ಮುಚ್ಚಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಎದುರುದಾರರಿಗೆ ದೂರು ಸಲ್ಲಿಸಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ಸದರಿ ಸರ್ವೆ ನಂ.8ನ್ನು ದುರಸ್ತಿಪಡಿಸಿ 8/1 ಮತ್ತು 8/2 ಎಂದು ವಿಂಗಡಿಸಲಾಗಿದೆ. ಅದರಂತೆ, ತಾಲ್ಲೂಕ್ ಭೂ ಮಾಪಕರು ಮತ್ತು ರಾಜಸ್ವ ನಿರೀಕ್ಷಕರು ಜಂಟಿಯಾಗಿ ಸ್ಥಳ ತನಿಖೆ

Sd/-

ಮಾಡಿ, ಅದರಲ್ಲಿ 8/2ರ ಗಂಟಿಗಾನಹಳ್ಳಿ ಗ್ರಾಮದಿಂದ ಸರ್ವೆ ನಂ.8/2ಕ್ಕೆ ನಕ್ಷೆ ದಾರಿಯಿದ್ದು, ನಕ್ಷೆಯಂತೆ ಸರ್ವೆ ನಂ.8/2ಕ್ಕೆ ಮಾತ್ರ ನಕ್ಷೆ ದಾರಿ ಮುಕ್ತಾಯಗೊಂಡಿದೆ. ಸದರಿ ಸರ್ವೆ ನಂ.8ರ ಶ್ರೀ.ಎಸ್.ಹೆಚ್.ನಾಗರಾಜು ಬಿನ್ ಲೇ.ಹುಚ್ಚಯ್ಯ ರವರು ಹಾಲೀ ಬೆಳೆ ಇಟ್ಟಿರುವುದರಿಂದ, ಬೆಳೆ ಕಟಾವು ಮುಗಿದ ನಂತರ ನಕ್ಷೆ ದಾರಿಯನ್ನು ಬಿಟ್ಟುಕೊಡುವುದಾಗಿ ಲಿಖಿತವಾಗಿ ಕೋರಿದ್ದಾರೆ. ಆದರೆ, ಸರ್ವೆ ನಂ.8/1 ಮತ್ತು ಇತರೆ ಸರ್ವೆ ನಂಬರುಗಳಲ್ಲಿ ನಕ್ಷೆ ದಾರಿ ಇಲ್ಲವೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಎದುರುದಾರರ ಆಕ್ಷೇಪಣೆಯನ್ನು ಅಲ್ಲಗಳೆದು, ದೂರಿನಲ್ಲಿನ ಅಂಶಗಳನ್ನೇ ಪುನರುಚ್ಚರಿಸಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:–

ಸರ್ವೆ ನಂ.8ರ ಜಮೀನಿನಲ್ಲಿ ರಸ್ತೆ ಅಸ್ತಿತ್ವದಲ್ಲಿದ್ದು, ಸದರಿ ರಸ್ತೆಯನ್ನು ಒತ್ತುವರಿ ಮಾಡಿ, ಸರ್ವೆ ನಂ.8ರ ಮಾಲೀಕರಾದ ಶ್ರೀ.ಹೆಚ್.ಎಸ್.ನಾಗರಾಜ್ ಬಿನ್ ಲೇ.ಹುಚ್ಚಮಲ್ಲಯ್ಯ ಎಂಬುವವರು ಬೆಳೆ ಬೆಳೆದಿದ್ದಾರೆ. ಆ ಸಂದರ್ಭದಲ್ಲಿ ಎದುರುದಾರರಿಗೆ ಲಿಖಿತವಾಗಿ ಮನವಿ ಸಲ್ಲಿಸಿ, ಬೆಳೆ ಕಟಾವಾದ ನಂತರ ರಸ್ತೆ ತೆರವುಗೊಳಿಸುವುದಾಗಿ ಒಪ್ಪಿದ್ದಾರೆ. ಯಾವುದೇ ಸರ್ಕಾರಿ ರಸ್ತೆಯನ್ನು ಯಾವುದೇ ವ್ಯಕ್ತಿ ಒತ್ತುವರಿ ಮಾಡಿದ ಸಂದರ್ಭದಲ್ಲಿ ಸದರಿ ಒತ್ತುವರಿಯನ್ನು ಕರ್ನಾಟಕ ಭೂ ಕಂದಾಯ ಕಾಯಿದೆ ಅನ್ವಯ ತೆರವುಗೊಳಿಸಿ, ಸಾರ್ವಜನಿಕ ಸಂಪರ್ಕ ಕಲ್ಪಿಸಿಕೊಡುವುದು ಎದುರುದಾರರ ಕರ್ತವ್ಯವಾಗಿದೆ. ಆದರೆ, ಎದುರುದಾರರು ಸದರಿ ರಸ್ತೆಯನ್ನು ಒತ್ತುವರಿ ಮಾಡಿ, ಬೆಳೆ ಹಾಕಿರುವ ವಿಚಾರ ಗೊತ್ತಿದ್ದರೂ ಸಹ ಅದನ್ನು ತೆರವುಗೊಳಿಸುವ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಎದುರುದಾರರು ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದೆ.

6. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಆದ್ದರಿಂದ, ಸದರಿ ರಸ್ತೆಯ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 10/3/17.

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತ-2,**
**ಕರ್ನಾಟಕ ರಾಜ್ಯ.**